ಇದು ತಪ್ಪಿಗೂ ಗೊತ್ತಿದೆ ನಿಜಕ್ಕೂ ಗೊತ್ತಿದೆ. ಗುಬ್ಬಿ ಕಂಪೆನಿ ಇವತ್ತು ಅವಸಾನದ ಅಂಚಿನಲ್ಲಿದೆ. ವರದರಾಜಾಚಾರ್ ಕಂಪೆನಿ ಮುಗಿಯಿತು. ಕೆ. ವಿ. ಆರ್. ಕಂಪೆನಿ ಇವತ್ತು ಇಲ್ಲ. ಬೀರ್ ಕಂಪೆನಿ ಇಲ್ಲ. ಉತ್ತರ ಕರ್ನಾಟಕದ ಗುಡಿಗೇರಿ ಕಂಪೆನಿ ಮಾತ್ರ ಇದೆ. ಸುಮಾರು ೨೫ ವರ್ಷಗಳ ಹಿಂದೆ ಮಾನ್ಯ ಅಧ್ಯಕ್ಷರೇ ತಾವು ವಿದೇಶದಿಂದ ಬಂದಂತಹ ಸಂದರ್ಭದಲ್ಲಿ ಗಾಂಧೀನಗರದ ಹತ್ತಿರ ಗುಬ್ಬಿ ಕಂಪೆನಿಗೆ ಬಂದಿದ್ದಿರಿ ಆಗ ಎಷ್ಟು ವೈಭವವಾಗಿ ರಂಗಮಂದಿರ ಮೆರೆದಿತ್ತು ಎಂಬುದನ್ನು ತಾವು ಮನಃಚಿರಲಾರಿರಿ. ಆದರೆ ಇವತ್ತು ಅದು ನಾಶವಾಗಿದೆ. ಈ ಅವಸಾನದ ಅಂಚಿನಲ್ಲಿರುವ ಕಂಪೆನಿಗಳನ್ನು ಮೇಲಕ್ಕೆ ಎತ್ತಲು ಸರಕಾರ ಒಂದು ಹೊಸ ಯೋಜನೆಯನ್ನು ಮಾಡಿ ಆ ಮೂಲಕ ಈ ಕಂಪೆನಿಗಳಿಗೆ ಕನಿಷ್ಠ ಪ್ರತಿ ವರ್ಷಕ್ಕೆ ಇಷ್ಟು ಎಂದು ಹಣವನ್ನು ನೀಡಿದರೆ ಅನುಕೂಲವಾಗುತ್ತದೆ. ಹೊಸ ಹೊಸ ನಾಟಕಗಳಿಗೆ ಆಲ್ಲದಿದ್ದರೂ ಕೂಡ ವರ್ಷಕ್ಕೆ ಒಂದುಸಲ ಸಹಾಯಧನವನ್ನು ಕೊಡ ತಕ್ಕಂತಹ ಪರಿಪಾಠವನ್ನು ಒಂದು ಹೊಸ ಯೋಜನೆಯ ರೂಪದಲ್ಲಿ ಮಾಡುವುದಕ್ಕೆ ಸಿದ್ಧರಿದ್ದೀರಾ ಎಂದು ತಮ್ಮಲ್ಲಿ ಕೇಳ ಬಯಸುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಸದಸ್ಯರು ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಅದನ್ನು ಪರಿಶೀಲನೆ ಮಾಡೋಣ.

ರಾಜ್ಯದಲ್ಲಿ ವಯಸ್ಕರ ಶಿಕ್ಷಣ

೧೧೪. ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ).—ಮಾನ್ಯ ಶಿಕ್ಷಣ, ಯುವಜನ ವ್ಯವಹಾರಗಳು, ಕ್ರೀಡೆಗಳು, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ''ವಯಸ್ಕರ ಶಿಕ್ಷಣ'' ಕ್ಕಾಗಿ ಖರ್ಚು ಮಾಡುತ್ತಿರುವ ಹೊತ್ತವೆಷ್ಟು ?

ಆ) ಮೇಲ್ಕಂಡ ''ವಯಸ್ಕರ ಶಿಕ್ಷಣ ಕ್ಕಾಗಿ'' ಕೇಂದ್ರ ಸರ್ಕಾರದಿಂದ ಪಡೆಯುತ್ತಿರುವ ಅನುದಾನದ ಹೊತ್ತವೆಷ್ಟು ?

ಇ) ''ವಯಸ್ಕರ ಶಿಕ್ಷಣ'' ಇಲಾಖೆಯು ಸಿಬ್ಬಂದಿ ವರ್ಗ ಹಾಗೂ ಆಡಳಿತ ನಿರ್ವಹಣೆಗಾಗಿ ಖರ್ಚು ಮಾಡುತ್ತಿರುವ ವಾರ್ಷಿಕ ಹೊತ್ತವೆಷ್ಟು ?

ಈ) ವಯಸ್ಕರ ಶಿಕ್ಷಣದಿಂದ ಯಾವ ಪ್ರಯೋಜನವೂ ಇಲ್ಲದಿರುವುದರಿಂದ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಉ) ಹಾಗಿದ್ದಲ್ಲಿ ವಯಸ್ಕರ ಶಿಕ್ಷಣವನ್ನು ರದ್ದುಗೊಳಿಸಿ ಅದಕ್ಕೆ ಖರ್ಚಾಗುವ ಹಣವನ್ನು ಪ್ರಾಥಮಿಕ ಶಿಕ್ಷಣಕ್ಕೆ ಉಪಯೋಗಿಸುವ ಉದ್ದೇಶ ಸರ್ಕಾರಕ್ಕಿದೆಯೇ ?

ಶ್ರೀ ಕೆ ಹೆಚ್. ರಂಗನಾಥ್ (ಶಿಕ್ಷಣ ಸಚಿವರು).—

ಅ) ವಯಸ್ಕರ ಶಿಕ್ಷಣಕ್ಕಾಗಿ ೧೯೮೮-೮೯ನೇ ಸಾಲಿನಿಂದ ೧೯೮೯-೯೦ನೇ ಸಾಲಿನವರೆಗೆ ಮಂಜೂರು ಮಾಡಿದ ಹೊತ್ತದ ವಿವರಗಳು ಕೆಳಕಂಡಂತಿವೆ.

೧೯೮೮-೮೯	ರೂ. ೪೯೦.೨೪ ಲಕ್ಷಗಳು
೧೯೮೯-೯೦	ರೂ. ೫೦೮.೪೨ ಲಕ್ಷಗಳು

ಆ) ೧೯೮೮-೮೯ ಮತ್ತು ೧೯೮೯-೯೦ನೇ ಸಾಲಿಂಗಳಲ್ಲಿ ವಯಸ್ಕರ ಶಿಕ್ಷಣಕ್ಕಾಗಿ ಕೇಂದ್ರ ಸರ್ಕಾರದಿಂದ ಪಡೆಯಲಾದ ಅನುದಾನದ ಹೊತ್ತಗಳು ಕೆಳಕಂಡಂತಿವೆ.

೧೯೮೮-೮೯	ರೂ. ೫೫.೫೬ ಲಕ್ಷಗಳಂ
೧೯೮೯-೯೦	ರೂ. ೨೯೦.೦೦ ಲಕ್ಷಗಳು

ಇ) ವಯಸ್ಕರ ಶಿಕ್ಷಣ ಇಲಾಖೆಯ ಸಿಬ್ಬಂದಿ ವರ್ಗ ಹಾಗೂ ಆಡಳಿತ ನಿರ್ವಹಣೆಗಾಗಿ ೧೯೮೮-೮೯, ೧೯೮೯-೯೦ನೇ ಸಾಲುಗಳಲ್ಲಿ ಮಿಕ್ಕ ಮಾಡಲಾಗಿರುವ ವಾರ್ಷಿಕ ಹೊತ್ತಗಳು ಕೆಳಕಂಡಂತಿವೆ.

೧೯೮೮-೮೯	ರೂ. ೧೭.೩೦ ಲಕ್ಷಗಳು
೧೯೮೯-೯೦	ರೂ. ೨೦.೬೦ ಲಕ್ಷಗಳು

ಈ) ಇಲ್ಲವೆ.

ಉ) ಉದ್ಭವಿಸುವುದಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ.—೧೯೮೮-೮೯ನೇ ಸಾಲಿನಲ್ಲಿ ವಯಸ್ಕರ ಶಿಕ್ಷಣ ಸಮಿತಿಗೆ ೬ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ ೧೯೮೯-೯೦ ರಲ್ಲಿ ೯ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ ಮತ್ತು ೧೯೮೮-೮೯ನೇ ಸಾಲಿನಲ್ಲಿ ಕೇಂದ್ರ ಸರಕಾರದಿಂದ ೫೬ ಲಕ್ಷ ರೂಪಾಯಿ ಅನುದಾನ ಬಂದಿದೆ, ೧೯೮೯-೯೦ ರಲ್ಲಿ ೩ ಕೋಟಿ ಅನುದಾನ ಬಂದಿದೆ ಎಂದು ತಿಳಿಸಿದ್ದೀರಿ. ಈ ರಾಜ್ಯದಲ್ಲಿ ವಯಸ್ಕರ ಶಿಕ್ಷಣ ಸಮಿತಿ ಕೆಲಸ ಈ ರಾಜ್ಯದಲ್ಲಿ ಸಹೆಯುತ್ತಿದೆಯೋ, ಇದು ಸರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ ಎಂಬುದು ಸರಕಾರದ ಗಮನಕ್ಕೆ ಬಂದಿದೆಯೇ ? ಬಂದು ಮೇಳೆ ಸರಕಾರದ ಗಮನಕ್ಕೆ ಬಂದಿದ್ದರೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಕೆ. ಹೆಚ್. ರಂಗನಾಥ್.—೧೯೮೮-೮೯ ರಲ್ಲಿ ೬ ಕೋಟಿ ಖರ್ಚು ಮಾಡಿದೆ ಎಂದು ಮಾನ್ಯ ಸದಸ್ಯರು ಹೇಳಿದ್ದು ಸರಿಯಲ್ಲ. ೬,೯೦,೨೪,೦೦೦ ರೂಪಾಯಿಯನ್ನು ಖರ್ಚು ಮಾಡಿದ್ದೇವೆ. ಎರಡು ವರ್ಷಕ್ಕೆ ಒಟ್ಟು ೧೦ ಕೋಟಿ ರೂಪಾಯಿಯಾಗುತ್ತದೆ. ಹಿಂದೆ ಒಬ್ಬರು ನಿರ್ದೇಶಕರು ಇದಕ್ಕಾಗಿ ಇದ್ದರು ಜಿಲ್ಲೆ ಮಟ್ಟದಲ್ಲಿ ಒಬ್ಬ ಅಧಿಕಾರಿ ಇದ್ದರು. ಆದರೆ ತಾಲ್ಲೂಕು ಮಟ್ಟದಲ್ಲಿ ಅಷ್ಟು ವ್ಯವಸ್ಥಿತವಾಗಿ ನೋಡಿಕೊಳ್ಳುವಂತಹ ಒಂದು ವ್ಯವಸ್ಥೆ ಇರಲಿಲ್ಲ. ದಿನಾಂಕ ೫-೫-೮೮ ರಿಂದ ನ್ಯಾಷನಲ್ ಲಿಟ್ರಸಿ ಮಿಷನ್ ಎಂಬ ಒಂದು ಹೊಸ ಹೆಸರನ್ನು ಕೊಟ್ಟಿರುವುದರ ಜೊತೆಗೆ ಒಂದು ಹೊಸ ರೂಪವನ್ನೂ ಕೂಡ ಕೊಟ್ಟಿದ್ದಾರೆ. ಇದರ ಪ್ರಕಾರ ಕೇಂದ್ರ ಸರ್ಕಾರವೇ ಎರಡು ಜಿಲ್ಲೆಯನ್ನು ಆರಿಸಿಕೊಂಡಿದೆ ಒಂದು ಬಿಜಾಪುರ ಮತ್ತೊಂದು ದಕ್ಷಿಣ ಕನ್ನಡ ಜಿಲ್ಲೆ. ಇನ್ನೂ ೧೮ ಜಿಲ್ಲೆಗಳಲ್ಲಿ ಒಂದು ಜಿಲ್ಲೆಗೆ ಒಂದೊಂದು ತಾಲ್ಲೂಕಿನಂತೆ ಹಾಗೂ ಒಂದು ತಾಲ್ಲೂಕಿನಲ್ಲಿ ಒಂದು ಗ್ರಾಮ, ಮಂಡಲ ಹೀಗೆ ಆರಿಸಿಕೊಂಡು ಅದನ್ನು ಎವಾಲ್ಯುಯೇಟ್ ಮಾಡುವುದಕ್ಕೆ ಅನುಕೂಲವಾಗುವ ರೀತಿಯಲ್ಲಿ ಒಂದು ಹೊಸ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಂಡಿದೆ. ರಾಜ್ಯ ಸರ್ಕಾರದಿಂದ ವಯಸ್ಕರ ಶಿಕ್ಷಣ ಇಲಾಖೆ ಇದೆ ಅದನ್ನು ಮತ್ತು ನ್ಯಾಷನಲ್ ಲಿಟ್ರಸಿ ಮಿಷನ್ ಎಂದು ಏನು ಕೇಂದ್ರ ಸರಕಾರದಿಂದ ಬಂದಿದೆ ಇವೆರಡನ್ನೂ ಮರ್ಜ್ ಮಾಡಬೇಕೆಂಬ ಅಭಿಪ್ರಾಯ ಕೂಡ ಇದೆ. ಸರಕಾರ ಈ ದಿಶೆಯಲ್ಲಿ ಅಂದರೆ ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡಬೇಕೆಂಬ ಕಾರ್ಯಕ್ರಮ ಏನು ಇದೆ, ಇದಕ್ಕೆ ಹೆಚ್ಚು ಆದ್ಯತೆಯನ್ನು ಕೊಟ್ಟು ಪ್ರಾಮಾಣಿಕವಾಗಿ ಮಾಡತಕ್ಕಂತಹ ನಿಟ್ಟಿನಲ್ಲಿ ಒಂದು ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಂಡಿದೆ. ಇದಕ್ಕೆ ಹೆಚ್ಚು ಹಣವನ್ನು ಖರ್ಚು ಮಾಡತಕ್ಕಂಥಾದ್ದನ್ನು ತಾವು ನೋಡುತ್ತಿದ್ದೀರಿ. ಕರ್ನಾಟಕ ಇದನ್ನು ಚೆನ್ನಾಗಿ ಮಾಡುತ್ತಿದೆ ಎಂದು ಕೇಂದ್ರ ಸರ್ಕಾರದವರು ಸಹ ಪ್ರಶಂಸೆ ಮಾಡಿದ್ದಾರೆ. ಈ ಕಾರ್ಯಕ್ರಮವನ್ನು ಮುಂದುವರಿಸಿಕೊಂಡು ಹೋಗುತ್ತಿದ್ದೇವೆ. ಐ ಎ. ಎಸ್ ಅಧಿಕಾರಿಯೊಬ್ಬರು ಇದಕ್ಕೆ ನಿರ್ದೇಶಕರಾಗಿ ಕೆಲಸ ಮಾಡುತ್ತಿದ್ದಾರೆ. ರಾಜ್ಯ ಮಟ್ಟದಲ್ಲಿ ಜಿಲ್ಲಾ ಮಟ್ಟದಲ್ಲಿ ಇದಕ್ಕೆ ವ್ಯವಸ್ಥೆ ಇದೆ. ಅದೇರೀತಿ ತಾಲ್ಲೂಕು ಮಟ್ಟದಲ್ಲಿ ಸಹ ವ್ಯವಸ್ಥೆ ಮಾಡತಕ್ಕಂಥಾದ್ದರ ಬಗ್ಗೆ ಯೋಚನೆ ಮಾಡುತ್ತಿದ್ದೇವೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ವಯಸ್ಕರ ಶಿಕ್ಷಣ ಸಮಿತಿ ಇಲಾಖೆ ಇದೆ ಎಂದು ಮಾನ್ಯ ಶಿಕ್ಷಣ ಸಚಿವರು ಸರಕಾರದ ಪರವಾಗಿ ಉತ್ತರ ಕೊಟ್ಟಿದ್ದಾರೆ. ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡಬೇಕೆಂಬ ಸರಕಾರದ ದಿಟ್ಟ ನಿಲುವನ್ನು ನಾನು ಮೆಚ್ಚುತ್ತೇನೆ. ಗ್ರಾಮೀಣ ಪ್ರದೇಶದಲ್ಲಿರುವ ನನಗೆ ಅಲ್ಲಿನ ಪರಿಸ್ಥಿತಿ ಗೊತ್ತಾಗುತ್ತದೆ. ಈ ಹಣ ಇವತ್ತು ಎಲ್ಲಿಗೆ ಹೋಗುತ್ತಿದೆ ಎಂದರೆ ಯಾರು ಮಂಡಲ ಪಂಚಾಯತಿಯ ಪ್ರಧಾನರುಗಳು ಇದ್ದಾರೆ, ಅವರ ಬ್ಯಾಗ್ ಹಿಡಿದುಕೊಂಡು ಓಡಾಡುತ್ತಿರುತ್ತಾರೆ ಅಂತಹವರು ನಾವು ಇಷ್ಟು ಜನಕ್ಕೆ ಅಕ್ಷರ ಕಲಿಸಿದ್ದೇವೆಂದು ಬರವಣಿಗೆಯ ಮೂಲಕ ಹೇಳಿ ಸುಳ್ಳು ಅಂಕಿ ಅಂಶವನ್ನು ಕೇಂದ್ರ ಸರಕಾರಕ್ಕೆ ಮತ್ತು ರಾಜ್ಯ ಸರಕಾರಕ್ಕೆ ಕಳಿಸುತ್ತಿದ್ದಾರೆ. ಪ್ರಾಮಾಣಿಕವಾಗಿ ಕೆಲಸ ಮಾಡಿ ಅವರು ಸರಿಯಾಗಿ ಕೊಟ್ಟಿದ್ದಾರೆಯೇ ಎಂಬುದನ್ನು ಪರಿಶೀಲನೆ ಮಾಡಿದ್ದೀರಾ ? ಜಿಲ್ಲಾ ಉಸ್ತುವಾರಿ ಮಂತ್ರಿಗಳು ಸಮ್ಮೆ ಜಿಲ್ಲೆಗೆ ಬಂದಾಗ ನಾನು ಕೂಡ ಇದನ್ನು ಪ್ರಸ್ತಾಪ ಮಾಡಿದ್ದೇನೆ. ಇದರಿಂದ ಅಷ್ಟಾಗಿ ಪ್ರಯೋಜನವಾಗುತ್ತಿಲ್ಲವೆಂದು ಕೂಡ ತಿಳಿಸಿದ್ದೇನೆ.

೧೭-೧೦ ಪಿ. ಎಂ.

ಇದರಿಂದ ಬಹಳಷ್ಟು ಹಣ ಪೋಲಾಗುತ್ತಿದೆ. ಈ ವಯಸ್ಕರ ವಿದ್ಯಾಭ್ಯಾಸಕ್ಕಾಗಿಯೇ ಒಂದು ವರ್ಷಕ್ಕೆ ೯ ಕೋಟಿ ರೂಪಾಯಿಗಳನ್ನು ಸರ್ಕಾರ ಏನು ಖರ್ಚುಮಾಡುತ್ತಿದೆ ಇದು ಕಡಿಮೆ ಹಣವೇನೂ ಅಲ್ಲ. ಆದರೆ ಇದರಲ್ಲಿ ಬಹಳಷ್ಟು ಹಣ ಪೋಲಾಗುತ್ತಿದೆ. ಪ್ರಾಮಾಣಿಕವಾಗಿ ಹಣವನ್ನು ಖರ್ಚು ಮಾಡಿ ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡಿ, ನನಗೆ ತಿಳಿದಿರುವಂತೆ ಅನಕ್ಷರಸ್ಥರು ಅಕ್ಷರಸ್ಥರಾಗುತ್ತಿಲ್ಲ. ಆದ್ದರಿಂದ ಸರ್ಕಾರ ಇದರ ಬಗ್ಗೆ ಕ್ರಮ ತೆಗೆದುಕೊಂಡು ನಿಜವಾಗಿ, ಪ್ರಾಮಾಣಿಕವಾಗಿ ಈ ಹಣ ಖರ್ಚಾಗಿ ಅನಕ್ಷರಸ್ಥರು ಅಕ್ಷರಸ್ಥರಾಗುವಂತೆ ಮಾಡಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಸಲಹೆ ಬಹಳ ಉತ್ತಮವಾದುದು, ಆದ್ದರಿಂದ ಅವರ ಸಲಹೆಯನ್ನು ಸರ್ಕಾರ ಗಮನದಲ್ಲಿಟ್ಟುಕೊಳ್ಳುತ್ತದೆ.

ಶ್ರೀ ಎನ್. ತಿಪ್ಪಸ್ವಾಮಿಗೌಡ —ವಯಸ್ಕರ ಶಿಕ್ಷಣ ವ್ಯವಸ್ಥೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಅನೇಕ ವರ್ಷಗಳಿಂದಲೂ ಜಾರಿಯಲ್ಲಿದೆ. ಶಿಕ್ಷಣ ಇಲ್ಲದಿರತಕ್ಕ ವಯಸ್ಕರ ಸಂಖ್ಯೆ ಕಡಿಮೆ ಏನೂ ಆಗುತ್ತಿಲ್ಲ. ದಿನೇ ದಿನೇ ಜಾಸ್ತಿಯಾಗುತ್ತಿದೆ. ಕಡ್ಡಾಯ ಶಿಕ್ಷಣ ಜಾರಿಯಲ್ಲಿದ್ದರೂ ಕೂಡ ಶೇಕಡ ೨೫ ರಿಂದ ೨೭ ಪರ್ಸೆಂಟ್‌ನಷ್ಟು ಮಕ್ಕಳು ಶಾಲೆಗೆ ಸರಿಯಾಗಿ ಹೋಗುತ್ತಿಲ್ಲ. ಇಂಥ ಮಕ್ಕಳನ್ನು ಕಡ್ಡಾಯವಾಗಿ ಶಾಲೆಗಳಿಗೆ ಹೋಗುವಂತೆ ಕಡ್ಡಾಯ ಮಾಡದೇ ಇರುವುದರಿಂದ ಅನಕ್ಷರಸ್ಥರ ಸಂಖ್ಯೆ ಜಾಸ್ತಿಯಾಗುತ್ತಿದೆ ಎಂಬುದನ್ನು ಮಾನ್ಯ ವಿದ್ಯಾ ಮಂತ್ರಿಗಳು ತಿಳಿದು ಇದನ್ನು ಸರಿಪಡಿಸುವುದಕ್ಕೆ ಏನಾದರೂ ಪ್ರಾಮಾಣಿಕ ಪ್ರಯತ್ನ ಮಾಡುತ್ತಾರೆಯೇ? ಎಂದು ತಮ್ಮ ಮೂಲಕ ಕೇಳಬಯಸುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್ —ಇದು ಅಡಲ್ಟ್ ಎಜುಕೇಷನ್ ಅಲ್ಲ, ಮೂಲ್ ಎಜುಕೇಷನ್ ಮಾನ್ಯ ಸದಸ್ಯರು ಕೇವಲ ಮುದುಕರ ಬಗ್ಗೆಯೇ ಪ್ರಶ್ನೆ ಮಾಡುತ್ತಿದ್ದಾರೆ. ಇದು ನ್ಯಾಷನಲ್ ಲಿಟ್ರೆಸಿ ಪ್ರೋಗ್ರಾಂ. ಇವತ್ತು ಶಾಲೆಗೆ ಹೋಗತಕ್ಕ ಮಕ್ಕಳ ಪೈಕಿ ಸುಮಾರು ೬೦–೭೦ ಪರ್ಸೆಂಟ್ ಡ್ರಾಪ್‌ಔಟ್ ಆಗುತ್ತಿದ್ದಾರೆ. ೨–೩ ವರ್ಷ ಆದಮೇಲೆ ಇವರೆಲ್ಲರೂ ಅನಕ್ಷರಸ್ಥರಾಗ ತ್ತಾರೆ. ಇದು ಬಹಳ ದೊಡ್ಡ ಪ್ರಮಾಣದ್ದಾಗಿರುವುದರಿಂದ ಇದರ ಬಗ್ಗೆ ವ್ಯವಸ್ಥಿತವಾಗಿ ವಿಚಾರ ಮಾಡಿ ಸರ್ಕಾರ ತೀವ್ರ ಗಮನಹರಿಸಬೇಕಾಗುತ್ತದೆ.

(ಚುಪ್ರ. ೧೧೩ ಮಾನ್ಯ ಸದಸ್ಯರು ಹಾಜರಿಲ್ಲ)

ಪ್ರಾಥಮಿಕ ಶಾಲಾ ಪಠ್ಯ ಪುಸ್ತಕಗಳ ಮುದ್ರಣ

೧೧೯. ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಮಾನ್ಯ ಶಿಕ್ಷಣ, ಯುವಜನ ವ್ಯವಹಾರಗಳು ಕ್ರೀಡೆಗಳು, ಕನ್ನಡ ಹಾಗೂ ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಈ ಶಿಕ್ಷಣ ವರ್ಷದಲ್ಲಿ ಪ್ರಾಥಮಿಕ ಶಾಲೆಗಳ ಪಠ್ಯ ಪುಸ್ತಕಗಳ ಮುದ್ರಣ ಹಾಗೂ ಸರಬರಾಜು ತಡವಾಗಿರುವ್ದದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ತಡವಾಗಲು ಕಾರಣಗಳೇನು ?

ಇ) ಸರ್ಕಾರವು ಇದನ್ನು ಸರಿಪಡಿಸಲು ಕೈಗೊಂಡ ಕ್ರಮಗಳೇನು ?

ಶ್ರೀ ಕೆ. ಹೆಚ್, ರಂಗನಾಥ್ (ಶಿಕ್ಷಣ ಮಂತ್ರಿಗಳು).—

ಅ) ಹೌದು.

ಆ) ೧. ೧೯೮೮ರ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿನ ಪುನಃ ಪರಿಶೀಲನೆ ಹಾಗೂ ಬದಲಾವಣೆ ತರಲು ಕೇಂದ್ರ ಸರ್ಕಾರ ಉದ್ದೇಶಿಸಿರುವುದರಿಂದ ವಿಳಂಬವಾಗಿದೆ.

೨. ಮೆ. ಹಿಂದೂಸ್ಥಾನ್ ಪೇಪರ್ ಕಾರ್ಪೋರೇಷನ್‌ನವರು ರಾಜ್ಯಕ್ಕೆ ಸರಬರಾಜಲ್ಲಿ ರಿಯಾಯ್ತಿ ದರದ ಬಿಳಿ ಕಾಗದ ಹೆಚ್ಚಿಕೆ ಮಾಡಿಲ್ಲವಾದ್ದರಿಂದ ವಿಳಂಬವಾಗಿದೆ.

ಇ) ೧೯೯೨–೯೩ನೇ ಸಾಲಿಗೆ ಬಹಳ ಪಠ್ಯ ಪುಸ್ತಕ ಮಾಳಿಗೆಯಲ್ಲಿ ಲಭ್ಯವಿದ್ದ ಶೇಕಡ ೪೫ ರಷ್ಟು ಪಠ್ಯ ಪುಸ್ತಕಗಳನ್ನು ವಿತರಿಸಲಾಗುವುದು. ಪಠ್ಯ ಪುಸ್ತಕಗಳ ಮುದ್ರಣಕ್ಕಾಗಿ ೨೮೦೦ ಮೆಟ್ರಿಕ್ ಟನ್ ಬಿಳಿ ಮುದ್ರಣ ಕಾಗದವನ್ನು ಮುಕ್ತ ಮಾರುಕಟ್ಟೆಯಲ್ಲಿ ಖರೀದಿಸಲಾಗಿದ್ದು ಜೇಡಿಕೆಗಳಿಗನುಸಾರವಾಗಿ ಪಠ್ಯ ಪುಸ್ತಕಗಳನ್ನು ಮುದ್ರಿಸಿ ಸರಬರಾಜು ಮಾಡಲಾಗುವುದು. ಮುದ್ರಣ ಕಾರ್ಯವನ್ನು ಎಲ್ಲಾ ಸರ್ಕಾರಿ ಮುದ್ರಣಾಲಯಗಳಲ್ಲಿ ಮೈಸೂರು, ಬೆಂಗಳೂರು, ಧಾರವಾಡ, ಮಡಿಕೇರಿ, ಗುಲ್ಬರ್ಗ ಹಾಗೂ ೮೦ ಖಾಸಗಿ ಮುದ್ರಣಾಲಯಗಳಿಗೆ ಮುದ್ರಣ ಕಾರ್ಯವನ್ನು ವಹಿಸಲಾಗಿದೆ.

ಶ್ರೀ ಪಿ. ಜಿ ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ, ೧೯೮೮ರ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿನ ಪುನಃ ಪರಿಶೀಲನೆ ಹಾಗೂ ಬದಲಾವಣೆ ತರಲು ಕೇಂದ್ರ ಸರ್ಕಾರ ಉದ್ದೇಶಿಸಿರುವುದರಿಂದ ಈ ಪಠ್ಯ ಪುಸ್ತಕಗಳ ಮುದ್ರಣ ಕಾರ್ಯ ಕಡಮಾಯಿತು ಎಂದು ಮಾನ್ಯ ಶಿಕ್ಷಣ ಮಂತ್ರಿಗಳು ಹೇಳಿದ್ದಾರೆ. ಆದರೆ ಇದರ ಅರ್ಥ ಏನು ಎಂದು ನನಗೆ ಅರ್ಥವಾಗುತ್ತಿಲ್ಲ. ಮಾನ್ಯ ಮಂತ್ರಿಗಳು ಕಳೆದ ೬ ತಿಂಗಳಿಂದ ಈ ಇಲಾಖೆಯ ಮಂತ್ರಿಗಳಾಗಿದ್ದಾರೆ, ಅಲ್ಲದೆ ಅವರು ಹಿರಿಯ ಹಾಗೂ ಒಳ್ಳೆಯ ಅನುಭವಸ್ಥರಾಗಿದ್ದಾರೆ